**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 06.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್.ಎಂ, ವಕೀಲರಿಂದಃ**

ದಾವೆಯ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಸದರಿ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಈ ದಾವೆಯನ್ನು ಬಾಲಕೃಷ್ಣ ಮತ್ತು ಅವರ ತಂಗಿಯ ವಿರುದ್ಧ ಸಲ್ಲಿಸಿರುತ್ತೇನೆ. ನಾನು ಖರೀದಿಸಿರುವ ಜಾಗಕ್ಕೆ ತೊಂದರೆ ಕೊಟ್ಟಿರುತ್ತಾರೆಂದು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತನ್ನು ಸುಮಾರು 30 ವರ್ಷಗಳ ಹಿಂದೆ ನನ್ನ ಗಂಡ ಚಿಕ್ಕನಾಯಕರವರಿಂದ ಖರೀದಿಸಿರುತ್ತಾರೆ. ದಾವಾ ಸ್ವತ್ತನ್ನು ಖರೀದಿಸಿದ 10 ವರ್ಷಗಳ ನಂತರ ನನ್ನ ಗಂಡ ಮೃತಪಟ್ಟಿರುತ್ತಾರೆ. ದಾವಾ ಸ್ವತ್ತಿನ ಆಸ್ತಿ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ 54x24 ಅಡಿಯುಳ್ಳ ಸ್ವತ್ತಾಗಿದ್ದು, ಪೂರ್ವ-ಪಶ್ಚಿಮ 54 ಅಡಿಗಳು ಮತ್ತು ಉತ್ತರ-ದಕ್ಷಿಣಕ್ಕೆ 24 ಅಡಿಗಳಾಗಿರುತ್ತದೆ. ಚಿಕ್ಕನಾಯಕರವರು ಸಿದ್ದಮ್ಮ ಎಂಬುವವರಿಂದ ಖರೀದಿಸಿದ್ದರು, ಆದರೆ ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ- ರಸ್ತೆ, ಪಶ್ಚಿಮಕ್ಕೆ - ತೋಟ ಮತ್ತು ಖಾಲಿ ನಿವೇಶನ, ಉತ್ತರಕ್ಕೆ - ಮಲೇನಾಯಕ ಮತ್ತು ದಕ್ಷಿಣಕ್ಕೆ - ಮರಿನಾಯಕ ರವರ ಸ್ವತ್ತು ಇರುತ್ತದೆ. ದಾವಾ ಸ್ವತ್ತನ್ನು ಖರೀದಿಸಿದ ನಂತರ ಪಂಚಾಯಿತಿಯಿಂದ ನನ್ನ ಗಂಡನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರಲಿಲ್ಲ. ಚಿಕ್ಕನಾಯಕರವರು ಎಷ್ಟು ಆಸ್ತಿಯನ್ನು ಖರೀದಿಸಿದ್ದರೋ ಅಷ್ಟೇ ಆಸ್ತಿಯನ್ನು ನನ್ನ ಗಂಡನಿಗೆ ಮಾರಾಟ ಮಾಡಿರುತ್ತಾರೆ. ಚಿಕ್ಕನಾಯಕರವರು ಯಾವ ದಿನಾಂಕದಂದು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ಚಿಕ್ಕನಾಯಕ, 1 ನೇ ಪ್ರತಿವಾದಿ, ಗೋವಿಂದ ಮತ್ತು ಚಿಕ್ಕತಮ್ಮಯ್ಯರವರು ಸಹಿ ಮಾಡಿರುತ್ತಾರೆ. 30 ವರ್ಷಗಳ ಹಿಂದೆ ನನ್ನ ಗಂಡ ಚಿಕ್ಕನಾಯಕರವರಿಂದ ಯಾವುದೇ ಆಸ್ತಿಯನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ಚಿಕ್ಕನಾಯಕ ಮತ್ತು 1 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 15 ವರ್ಷಗಳ ಹಿಂದೆ ನನ್ನ ಹೆಸರಿಗೆ ಖಾತೆ

ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಅರ್ಜಿಯ ಮೇಲೆ ಯಾವ ಕ್ರಮ ವಹಿಸಿರುತ್ತಾರೆಂದು ವಿಚಾರಿಸಿರುತ್ತೀರಾ ಎಂದರೆ ಆ ಬಗ್ಗೆ ನಮಗೆ ಏನು ಕೊಟ್ಟಿರುವುದಿಲ್ಲ. ನನ್ನ ಅರ್ಜಿಯ ಬಗ್ಗೆ ಕ್ರಮವಹಿಸದಿರುವ ಬಗ್ಗೆ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿಲ್ಲ. ಚಿಕ್ಕನಾಯಕರವರಿಂದ ಖರೀದಿಸಿರುತ್ತೇವೆ ಎಂದು ಹೇಳಿದ ಸ್ವತ್ತು ನನ್ನ ಗಂಡನ ಹೆಸರಿನಲ್ಲಿರುತ್ತದೆ. ಇತ್ತೀಚೆಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿಲ್ಲ. 54X24 ಅಡಿಗಳ ವಿಸ್ತೀರ್ಣದಷ್ಟು ಆಸ್ತಿ ಯಾವತ್ತೂ ಕೂಡ ಸಿದ್ದಮ್ಮರವರ ಬಳಿಯಿರಲಿಲ್ಲ, ಅಷ್ಟು ವಿಸ್ತೀರ್ಣದ ಆಸ್ತಿಯನ್ನು ಚಿಕ್ಕನಾಯಕರವರು ಖರೀದಿಸಿರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕನಾಯಕರವರು ಮೃತಪಟ್ಟ ನಂತರ ಪ್ರತಿವಾದಿಗಳ ತಾಯಿಯ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯವರು ಇ-ಸ್ವತ್ತಿನ ಖಾತೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವುದೇ ರೀತಿಯಲ್ಲೂ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**